## 2ನೇ ಅಪರ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಮದ್ದೂರು

ಸಿ.ಸಿ.385/2020

ಫಿರ್ಯಾದಿಃ- ಮದ್ದೂರು ಪೊಲೀಸ್ ಠಾಣೆ

-ವಿರುದ್ಧ-

ಆರೋಪಿತರು ಃ- ನಾಗರಾಜು ಬಿನ್ ಲೇಟ್ ರಾಮೇಗೌಡ , 46 ವರ್ಷ ,
ನಳಂದ ಕಾನ್ವೆಂಟ್ ಪಕ್ಕ , ವಿ ವಿ ನಗರ , ಮದ್ದೂರು ಟೌನ್

### ಃ ದೋಷಾರೋಪಣೆ ಃ-

ಶ್ರೀ. **ಆದಿತ್ಯ ಆರ್. ಕಲಾಲ್** , ಬಿ.ಎ., ಎಲ್.ಎಲ್.ಬಿ., 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನಾಃ.ದಂ.ಗಳು, ಮದ್ದೂರು ಆದ ನಾನು ಈ ಕೆಳಕಂಡ ನಿಮ್ಮನ್ನು ದೋಷಾರೋಪಣೆಗೆ ಒಳಪಡಿಸುತ್ತಿರುವುದೇನೆಂದರೆಃ-

ದಿನಾಂಕ 12-2-2018 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ಮದ್ದೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಮದ್ದೂರು ಟೌನ್ ಲೀಲಾವತಿ ಬಡಾವಣೆ , 1ನೇ ಕ್ರಾಸ್ ನ ಮಾನ್ಯ ಶಾಸಕರಾದ ಡಿ ಸಿ ತಮ್ಮಣ್ಣರವರ ಮನೆಯ ನೇರದಲ್ಲಿ ಚಾಸಾ.1 ಮತ್ತು 2 ರವರು ನಡದುಕೊಂಡು ಬರುತ್ತಿದ್ದಾಗ , ಆರೋಪಿಯಾದ ನೀನು ಏಕಾಏಕಿ ಚಾಸಾ.1 ರವರನ್ನು ಮುಂದೆ ಹೋಗದಂತೆ ತಡೆದು ನಿಲ್ಲಿಸಿ ಅಕ್ರಮ ಪ್ರತಿಬಂಧವನ್ನುಂಟುಮಾಡಿದ್ದರಿಂದ ಭಾ.ದಂ.ಸಂ ಕಲಂ 341ರಡಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ ಎನ್ನುವುದಾಗಿದೆ?

ಎರಡನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿಯಾದ ನೀನು ಚಾಸಾ.1 ರವರನ್ನು ಹಿಡಿದು ಎಳೆದಾಡಿ , ಚಾಸಾ.1 ರವರು ಹಾಕಿದ್ದ ಚೂಡಿದಾರದ ಟಾಪನ್ನು ಹರಿದುಹಾಕಿ , ಸಾರ್ವಜನಿಕವಾಗಿ ಆಕೆಯ ಮೇಲೆ ಅಪರಾಧಿಕ ಬಲಪ್ರಯೋಗ ಮಾಡಿ, ಆಕೆಯ ಮಾನಕ್ಕೆ ಕುಂದುಂಟುಮಾಡಿದ್ದರಿಂದ ಭಾ.ದಂ.ಸಂ ಕಲಂ 354(ಬಿ)ರಡಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ ಎನ್ನುವುದಾಗಿದೆ?

ಕೊನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿಯಾದ ನೀನು ಕೈಯಿಂದ ಚಾಸಾ.1 ರವರ ಕಪಾಲಕ್ಕೆ ಹೊಡೆದು , ಜಗಳ ಬಿಡಿಸಲು ಬಂದ ಚಾಸಾ.2 ರವರ ಮಂದಲೆ ಹಿಡಿದು ಎಳೆದಾಡಿ , ಕಾಲಿನಿಂದ ಒದ್ದು , ಕೆಸಗೆ ಬೀಳಿಸಿ , ಗಲಾಟೆ ಶಬ್ದ ಕೇಳಿ ಬಿಡಿಸಲು ಬಂದ ಚಾಸಾ.3 ರವರ ಎಡಗೈ ಉಂಗುರದ ಬೆರಳನ್ನು ಆರೋಪಿಯಾದ ನೀನು ಕಚ್ಚಿ ಸಾಮಾನ್ಯ ಸ್ವರೂಪದ ನೋಕದ್ದರಿಂದ ಭಾ.ದಂ.ಸಂ ಕಲಂ 323ರಡಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ ಎನ್ನುವುದಾಗಿದೆ?

(ಮೇಲೆ ಹೇಳಿದ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ದಿನಾಂಕ **18-9-21** ರಂದು ಓದಿ ಹೇಳಿ ಅವರ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದೆ.)

18/9/21

(ಶ್ರೀ ಆದಿತ್ಯ ಆರ್. ಕಲಾಲ್ )
2ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.ಮದ್ದೂರು.

ನಾಗರಾಜು